# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 213 (223)
2. ಸದಸ್ಯರ ಹೆಸರು : ಶ್ರೀ ರಘುನಾಥರಾವ್ ಮಲ್ಕಾಪೂರೆ
   (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ. | ಬೀದರ್ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಹಂಚಿಕೆ ಮಾಡಲಾಗುವ ಫ್ಲಾಟ್.ಗಳಿಗೆ ಸಬ್ಸಿಡಿ ನೀಡುವ ಕಾರ್ಯಕ್ರಮಕ್ಕೆ ಆದೇಶ ಹೊರಡಿಸಿರುವುದು ಯಾವಾಗ; (ಮಾಹಿತಿ ನೀಡುವುದು) | ದಿನಾಂಕ 28.12.2017ರ ಸರ್ಕಾರಿ ಆದೇಶ ಸಂಖ್ಯೆ ಸಿಐ 113 ಎಸ್‌ಪಿಐ 2017 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಹಂಚಿಕೆ ಮಾಡಲಾಗುವ ಮಳಿಗೆ/ ನಿವೇಶನಗಳಿಗೆ ಸಬ್ಸಿಡಿ ನೀಡಲು ಆದೇಶ ಹೊರಡಿಸಲಾಗಿದೆ.<br>ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ. | ಹಿಂದುಳಿದ ವರ್ಗಗಳ ಶೇಕಡ ಎಷ್ಟು ಸಬ್ಸಿಡಿಯನ್ನು ಈ ಫ್ಲಾಟ್.ಗಳಿಗೆ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ; | ಹಿಂದುಳಿದ ವರ್ಗಗಳ (ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ) ಹಂಚಿಕೆದಾರರುಗಳಿಗೆ ಹಂಚಿಕೆ ಮಾಡುವ ನಿವೇಶನ / ಶೆಡ್.ಗಳ ಒಟ್ಟು ಮೊತ್ತದಲ್ಲಿ ಶೇಕಡ 25ರಷ್ಟು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಇ. | ಸರ್ಕಾರ ಆದೇಶ ಹೊರಡಿಸಿದಾಗಿನಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಎಷ್ಟು ಹಿಂದುಳಿದ ವರ್ಗಗಳ ಫಲಾನುಭವಿಗಳು ಈ ಪ್ರಯೋಜನವನ್ನು ಪಡೆದಿರುತ್ತಾರೆ; ಎಷ್ಟು ಸಬ್ಸಿಡಿಯನ್ನು ನೀಡಲಾಗಿದೆ? (ವರ್ಗವಾರು, ಫಲಾನುಭವಿಗಳವಾರು ಸಂಪೂರ್ಣ ಮಾಹಿತಿ ನೀಡುವುದು) | ಕೆ.ಐ.ಎ.ಡಿ.ಬಿ:- ಸದರಿ ಆದೇಶ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಬೀದರ್ ಜಿಲ್ಲೆಯ ಹಿಂದುಳಿದ ವರ್ಗಗಳ ಫಲಾನುಭವಿಗಳು ಈ ಪ್ರಯೋಜನವನ್ನು ಪಡೆದಿರುವುದಿಲ್ಲ.<br><br>ಕೆ.ಎಸ್.ಎಸ್.ಐ.ಡಿ.ಸಿ:- ಹಿಂದುಳಿದ ವರ್ಗಗಳ 84 ಫಲಾನುಭವಿಗಳಿಗೆ ಶೇಕಡ 25ರಷ್ಟು ರಿಯಾಯಿತಿ ಅಂದರೆ ರೂ.3,21,52,883/-ಗಳ ಅನುದಾನ ಬಿಡುಗಡೆ ಮಾಡಲು ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಅದರಲ್ಲಿ ಬೀದರ್ ಜಿಲ್ಲೆಯ 13 ಫಲಾನುಭವಿಗಳು ಒಳಗೊಂಡಿರುತ್ತಾರೆ<br><br>ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |

ಸಂಖ್ಯೆ: ಸಿಐ 148 ಐಎಪಿ (ಇ) 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಅನುಬಂಧ-I

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗಳಿಂದ ಹಂಚಿಕೆ ಮಾಡಲಾಗುವ ಪ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ) ಶೇ.25 ರಷ್ಟು ರಿಯಾಯಿತಿ ನೀಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೈವಾಇ/ಕೈಅ/ಇಸ/12/ಮು.ಪ್ಲಾ.ಶೇ/ 2017-18, ದಿನಾಂಕ 08.05.2017.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ಸಂ: 16089
02 JAN 2018
36929
ಸ್ವೀಕರಿಸಲಾಗಿದೆ
ಕೇಂದ್ರ ಕಛೇರಿ, ಬೆಂಗಳೂರು.

-000-

ಪ್ರಸ್ತಾವನೆ:

2017-18ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ 406 ರಲ್ಲಿ "*ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗಳಿಂದ ಹಿಂದುಳಿದ ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ರವರಿಗೆ ಮಂಜೂರು / ಹಂಚಿಕೆ ಮಾಡಲಾಗುವ ಪ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲಾಗುವುದು. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ರಿಯಾಯಿತಿಯನ್ನು 1 ಎಕರೆಗೆ ಮತ್ತು ಇತರ ಜಿಲ್ಲೆಗಳಲ್ಲಿ 2 ಎಕರೆಗೆ ಸೀಮಿತಗೊಳಿಸಲಾಗುವುದು* ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ಗೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆ.ಎಸ್.ಎಸ್.ಐ.ಡಿ.ಸಿ) ಗಳಿಂದ ಹಂಚಿಕೆಯಾಗುವ ಪ್ಲಾಟ್ / ಶೆಡ್ಡುಗಳನ್ನು ರಿಯಾಯಿತಿ ದರದಲ್ಲಿ ನೀಡಲು ಕರಡು ಮಾರ್ಗಸೂಚಿಯೊಂದಿಗೆ ನಿಗಧಿತ ನಮೂನೆಯಲ್ಲಿ ಪ್ರಸ್ತಾವನೆ ಸಲ್ಲಿಸಿ, ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಅನುಮೋದನೆಯನ್ನು ನೀಡಲು ಕೋರಿರುತ್ತಾರೆ.

ಈ ಹೊಸ ಯೋಜನೆಗೆ 2017-18ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಅನುದಾನ ಒದಗಿಸದೆ ಇರುವುದರಿಂದ ಅನುದಾನಕ್ಕಾಗಿ ಹಿಂದುಳಿದ ವರ್ಗಗಳ ಇಲಾಖೆಯನ್ನು ಕೋರಲಾಗಿದ್ದು, ಸದರಿ ಇಲಾಖೆಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೆ ಅನುದಾನ ನಿಗಧಿಪಡಿಸಿಕೊಳ್ಳುವಂತೆ ತಿಳಿಸಿರುತ್ತದೆ. ಅನುದಾನ ಒದಗಿಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಾ ಬೇರೆ ಇಲಾಖೆಗಳಿಂದ ಅನುದಾನ ಒದಗಿಸುವುದು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ. ಈ ವಿಷಯದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಘೋಷಣೆಯ ಯೋಜನೆಗಳ ಅನುಷ್ಠಾನ ಸರ್ಕಾರದ ಆದ್ಯತೆಯಾಗಿದೆ. ಮೊದಲಿಗೆ ಸದರಿ ಘೋಷಣೆ ಅನ್ವಯ ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಯು ಹಿಂದುಳಿದ ವರ್ಗದ ಅರ್ಹ ಹಂಚಿಕೆದಾರರಿಗೆ ಪ್ಲಾಟ್ / ಶೆಡ್ಡುಗಳನ್ನು ಯೋಜನೆಯನುಸಾರ ಹಂಚಿಕೆ ಮಾಡುವುದು. ತದನಂತರ, ಸದರಿ ಸಂಸ್ಥೆಗಳು ಪ್ರಸಕ್ತ ಸಾಲಿನಲ್ಲಿ ಹಿಂಬರಿಸಬೇಕಾದ ಒಟ್ಟಾರೆ ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಿದ ತರುವಾಯ ಆಡಳಿತ ಇಲಾಖೆಯು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಮುಂದಿನ ಸೂಕ್ತ ಕ್ರಮ ಜರುಗಿಸಲು ಆದೇಶಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಮುಂದಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿ ಐ 113 ಎಸ್ ಪಿ ಐ 2017, ಬೆಂಗಳೂರು, ದಿನಾಂಕ 28.12.2017</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗಳಿಂದ ಹಿಂದುಳಿದ ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ರವರಿಗೆ ಮಂಜೂರು / ಹಂಚಿಕೆ ಮಾಡಲಾಗುವ ಪ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲು ಸರ್ಕಾರವು ತಾತ್ವಿಕ ಅನುಮೋದನೆ (In-principle approval) ನೀಡಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ರಿಯಾಯಿತಿಯನ್ನು 1 ಎಕರೆಗೆ ಮತ್ತು ಇತರ ಜಿಲ್ಲೆಗಳಲ್ಲಿ 2 ಎಕರೆಗೆ ಸೀಮಿತಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 190 ವೆಚ್ಚ-1/2017, ದಿನಾಂಕ 18.05.2017 ಮತ್ತು ಆಇ 416 ವೆಚ್ಚ-1/2017, ದಿನಾಂಕ 29.11.2017 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ. ಪಿಡಿ 37 ಎಫ್ಆರ್‌ಬಿ 2017, ದಿನಾಂಕ 18.05.2017 ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
G. Nagaratnamma
(ನಾಗರತ್ನಮ್ಮ.ಜಿ) 28/12/17
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಗೆ,

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ ಹೌಸ್, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-01.
4. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49, ಖನಿಜ ಭವನ, ಡಿ.ದೇವರಾಜು ಅರಸ್ ರಸ್ತೆ, ಬೆಂಗಳೂರು-01.
5. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ, ಖನಿಜ ಭವನ, ಡಿ.ದೇವರಾಜು ಅರಸ್ ರಸ್ತೆ, ಬೆಂಗಳೂರು-01.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10.

ಅನುಬಂಧ-2

ವಿಧಾನಪರಿಷತ್ ಪ್ರಶ್ನೆ ಸಂ: 213(223)- ಶ್ರೀ ರಘುನಾಥ್ ರಾವ್ ಮಲ್ಕಾಪೂರೆ : ಅನುಬಂಧ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕಲಬುರಗಿ ವಿಭಾಗ, ಕಲಬುರಗಿ.

ನಮೂನೆ

| ಕ್ರ ಸಂ | ವರ್ಷ | ಕೈಗಾರಿಕಾ ವಸಾಹತುವಿನ ಹೆಸರು | ನಿವೇಶನ/ ಮಳಿಗೆ ಸಂಖ್ಯೆ | ಹಂಚಿಕೆ ದಿನಾಂಕ | ಸ್ವಾಧೀನ ದಿನಾಂಕ | ಘಟಕದ ಹೆಸರು & ಫಲಾನುಭವಿ ಹೆಸರು | ಪ್ರವರ್ಗ | ನಿವೇಶನದ ಮೌಲ್ಯ | ಶೇ.25% ರಷ್ಟು ನಿವೇಶನದ ಮೊತ್ತ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | 2018-19 | ಶಹಾಬಾದ್ 2ನೇ ಹಂತ | ಪಿ-06 | 07.03.2019 | 08.08.2019 | ಮೆ॥ ವಿ.ಕೆ.ಜಿ. ಫೂಡ್ ಪ್ರೋಡೆಕ್ಟ್, ಶ್ರೀಮತಿ ಸವಿತಾ.ಎಸ್. ಗುತ್ತೇದಾರ್ ಗಂಡ ಸತೀಶ್.ವಿ. ಗುತ್ತೇದಾರ್ | ಪ್ರವರ್ಗ-2ಎ | 903,000.00 | 225,750.00 |
| 2 | 2018-19 | | ಕ್ಯೂ-06 | 19.02.2019 | 10.07.2019 | ಮೆ॥ ಗ್ಔರಿ ಇಂಡಸ್ಟ್ರೀಸ್, ಶ್ರೀ ಮೊಹಮ್ಮದ್ ಯುಸುಫ್ ತಂದೆ ಅಬ್ದುಲ್ ಖುದ್ದುಸ್, | 2ಬಿ | 546,000.00 | 136,500.00 |
| 3 | 2018-19 | | ಕ್ಯೂ-11 | 19.02.2019 | - | ಮೆ॥ ಮಾಡರ್ನ್ ಪಿ & ಪಿ ಇಂಡಸ್ಟ್ರೀಸ್, ಶ್ರೀ ಖಾಲೀದ್ ನವೀದ್ ತಂದೆ ಅಬ್ದುಲ್ ಭಾಕಿ, | 2ಬಿ | 546,000.00 | 136,500.00 |
| 4 | 2018-19 | | ಕ್ಯೂ-15 | 19.02.2019 | 04.07.2019 | ಮೆ॥ ವಿ.ಕೆ.ಜಿ ಇಂಜಿನೀಯರಿಂಗ್ ವರ್ಕ್ಸ್, ಶ್ರೀ ಅಮೋಘ್ ತಂದೆ ಸತೀಶ್ ಗುತ್ತೆದಾರ್, | 2ಎ | 546,000.00 | 136,500.00 |
| 5 | 2018-19 | | ವಿ.ನಿ-16 | 19.02.2019 | 06.08.2019 | ಮೆ॥ ಪಾಪು ಇಂಡಸ್ಟ್ರೀ, ಶ್ರೀ ಮೊಹಮ್ಮದ್ ಜಫರ್ ಜುಲಫೇಕಾರ್ ಅಲಿ ತಂದೆ ಮೊಹಮ್ಮದ್ ಖಲೀಲ್ ಅಹ್ಮದ್, | 2ಬಿ | 541,800.00 | 135,450.00 |
| 6 | 2018-19 | ಹುಮನಾಬಾದ್ 2ನೇ ಹಂತ | ವಿ.ನಿ-27 | 19.02.2019 | 10.12.2019 | ಮೆ॥ ಭಾರತ್ ಐಸ್ ಕ್ರೀಮ್, ಶ್ರೀಮತಿ ನುಜಾಹತ್ ಬೇಗಂ ಗಂಡ ಮೊಹಮ್ಮದ್ ಶೋಹೆಬ್ & ಮೊಹಮ್ಮದ್ ಶೋಹೆಬ್ ತಂದೆ ಅಬ್ದುಲ್ಜಲೀಲ್ | 2ಬಿ | 437,850.00 | 109,462.50 |
| 7 | 2018-19 | | ವಿ.ನಿ-30 | 19.02.2019 | 10.12.2019 | ಮೆ॥ಕರ್ನಾಟಕ ಫ್ಯಾಬ್ರಿಕೇಷನ್ ವರ್ಕ್ಸ್, ಶ್ರೀಮತಿ ಶಭಾನ ಗಂಡ ಮೋಯ್ನುದ್ದೀನ್ & ಮೋಯ್ನುದ್ದೀನ್ ತಂದೆ ರಶೀದ್ ಮಿಯಾ | 2ಬಿ | 774,900.00 | 193,725.00 |

ವಿಧಾನಪರಿಷತ್ ಪ್ರಶ್ನೆ ಸಂ: 213(223)– ಶ್ರೀ ರಘುನಾಥ್ ರಾವ್ ಮಲ್ಕಾಪೂರೆ : ಅನುಬಂಧ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕಲಬುರಗಿ ವಿಭಾಗ, ಕಲಬುರಗಿ.

**ನಮೂನೆ**

| ಕ್ರ ಸಂ | ವರ್ಷ | ಕೈಗಾರಿಕಾ ವಸಾಹತುವಿನ ಹೆಸರು | ನಿವೇಶನ/ ಮಳಿಗೆ ಸಂಖ್ಯೆ | ಹಂಚಿಕೆ ದಿನಾಂಕ | ಸ್ವಾಧೀನ ದಿನಾಂಕ | ಘಟಕದ ಹೆಸರು & ಫಲಾನುಭವಿ ಹೆಸರು | ಪ್ರವರ್ಗ | ನಿವೇಶನದ ಮೌಲ್ಯ | ಶೇ.25% ರಷ್ಟು ನಿವೇಶನದ ಮೊತ್ತ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 8 | 2018–19 | | ವಿ.ನಿ–35 | 19.02.2019 | 15.10.2019 | ಮೆ॥ ಗೋಗಿ ಇಂಜಿನೀಯರಿಂಗ್ ವರ್ಕ್ಸ್, ಶ್ರೀ ಜಾಕಿರ್ ಹುಸೇನ್ ತಂದೆ ಜಹೀದ್ ಹುಸೇನ್ | 2ಬಿ | 777,000.00 | 194,250.00 |
| 9 | 2018–19 | | ವಿ.ನಿ–46 | 19.02.2019 | 21.01.2020 | ಮೆ॥ಕೆ.ಕೆ.ಪವರ್ ಲೈನ್ಸ್,ಶ್ರೀ ಅಫ್ತಾಬ್–ಇ–ಆಲಮ್ ತಂದೆ ಖಾಜಾಮೈನೋದ್ದೀನ್ ಎಂ. ತಪ್ಪೆವಾಲೆ | 2ಬಿ | 518,700.00 | 129,675.00 |
| 10 | 2018–19 | | ವಿ.ನಿ–56 | 19.02.2019 | 07.01.2020 | ಮೆ॥ ಕೆ.ಬಿ. ಎನ್ ಇಂಡಸ್ಟ್ರೀಸ್, ಶ್ರೀ ಎಂ.ಎ ಸಲೀಮ್ ತಂದೆ ಅಬ್ದುಲ್ ಗಫೂರ್ | 2ಬಿ | 724,500.00 | 181,125.00 |
| 11 | 2018–19 | ಕೋಳಾರ್ ಬೀದರ್ | ಕ್ಯೂ–08 | 19.02.2019 | 20.08.2019 | ಮೆ॥ ಕಿರ್ಮಾನಿ ಇಂಡಸ್ಟ್ರಿಸ್, ಶ್ರೀ.ಅಬ್ದುಲ್ ವಸೀಮ್ ತಂದೆ ಅಬ್ದುಲ್ ನಹಿಮ್, | 2ಬಿ | 928,200.00 | 232,050.00 |
| 12 | 2018–19 | | ಪಿ–35 | 19.02.2019 | 17.07.2019 | ಮೆ॥ ರೋದೆ ಆಫ್ಸೆಟ್, ಶ್ರೀ. ಜಾರ್ಜ್ ಫರ್ನಂಡಿಸ್.ಬಿ ತಂದೆ ಬೋಜಪ್ಪ ಮೆಟಗೆ, | ಪ್ರ–1 | 1,535,100.00 | 383,775.00 |
| 13 | 2018–19 | ಬಸವಕಲ್ಯಾಣ | ಕ್ಯೂ–05 | 19.02.2019 | 16.05.2019 | ಮೆ॥ ಆರುಷಿ ಇಂಜಿನೀಯರಿಂಗ್ ವರ್ಕ್ಸ್, ಶ್ರೀಮತಿ ತನುಜಾ ಬಿ.ಕಾಸರ್ ಗಂಡ ಭೀಮರಾವ್ ಕಾಸರ್, | 2ಎ | 327,600.00 | 81,900.00 |
| | | | | | | | | ಒಟ್ಟು | **2,276,662.50** |